ಪಿ. ಡಬ್ಲ್ಯೂ - 01

**ದಿನಾಂಕ:26-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು:- 1 ರಿಂದ 5 ನೇ ಪ್ರತಿವಾದಿಗಳ ಪರ ಶ್ರೀ. ಎಲ್. ಪಿ. ಎಸ್, ವಕೀಲರಿಂದ:-**

**4.** ನನಗೆ ದಾವಾಸ್ವತ್ತಿನ ಚೆಕ್ಕುಬಂಧಿ ಗೊತ್ತು. ಪೂರ್ವಕ್ಕೆ ಮಾಗಡಿ ರಂಗಯ್ಯನವರ ಸ್ವತ್ತು, ಪಶ್ಚಿಮಕ್ಕೆ ಸುಗ್ಗಮ್ಮನವರ ಸ್ವತ್ತು, ಉತ್ತರಕ್ಕೆ ಸ್ವಾಮೀಯವರ ಸ್ವತ್ತು ಮತ್ತು ದಕ್ಷಿಣಕ್ಕೆ ಪಟೇಲ್ ನರಸಪ್ಪನವರ ಸ್ವತ್ತು ಇದೆ. ಮುಟೇಶನ್ ರಿಜಿಸ್ಟರ್ ಆಧಾರದ ಮೇಲೆ ವಾದಿಯು ದಾವಾಸ್ವತ್ತಿಗೆ ಚೆಕ್ಕುಬಂಧಿಯನ್ನು ನಮೂದಿಸಿರುತ್ತಾರೆ. ವಾದಿಯು ಲೇಟ್ ನರಸಯ್ಯನವರ ಮಗನೆಂದು ತೋರಿಸಲು ನಾನು ನ್ಯಾಯಾಲಯಕ್ಕೆ ವಂಶವೃಕ್ಷ ಮತ್ತು ಆಧಾರ್ ಕಾರ್ಡ್ ನ್ನು ಹಾಜರುಪಡಿಸಿದ್ದೇನೆ. ನೀವು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳ ಪೈಕಿ ವಂಶವೃಕ್ಷ ಮತ್ತು ಆಧಾರ್ ಕಾರ್ಡ್ ಇರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ದಾವಾಸ್ವತ್ತಿನ ಸರ್ವೆ ನಂಬರ್ 108/63 ಕ್ಕೆ ಸಂಬಂಧಿಸಿದಂತೆ ನಾನು ಸರ್ವೆ ದಾಖಲೆಗಳನ್ನು ನೋಡಿರುತ್ತೇನೆ. ಇಂದಿಗೂ ಸಹ ಸದರಿ ಸರ್ವೆ ದಾಖಲೆಗಳು ಸಂಬಂಧಪಟ್ಟ ಕಛೇರಿಯಲ್ಲಿ ಇದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ವಾದಿಯು ಸರ್ವೆ ನಂ.108/63 ರ ಸ್ವತ್ತಿನ ಸ್ವಾ ಧೀನದಲ್ಲಿ ಇದ್ದಾರೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಸರ್ವೆ ದಾಖಲೆಗಳನ್ನು ಹಾಜರುಪಡಿಸುತ್ತೇನೆ.

5. ಈಗ ಸಾಕ್ಷಿಗೆ ನಿಪಿ-4 ನ್ನು ತೋರಿಸಿದ್ದು, ಅದರಲ್ಲಿ ವಾದಿಯ ತಂದೆಯವರು ಯಾವ ಆಧಾರದ ಮೇಲೆ ಸರ್ವೆ ನಂ.108/63 ರಲ್ಲಿ ಮಾಲೀಕತ್ವ ಮತ್ತು ಸ್ವಾಧೀನವನ್ನು ಹೊಂದಿದ್ದಾರೆ ಎಂದು ನಿಪಿ-4 ರ ಕಲಂ.10 ಮತ್ತು 12 ರಲ್ಲಿ ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಪಿ-5 ಕ್ಕೆ

ಅನುಗುಣವಾಗುವಂತೆ ಯಾವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಚೆಕ್ ಲಿಸ್ಟ್ ನ್ನು ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ಈ ದಾವೆಗೋಸ್ಕರ ನೀವು ನಿಪಿ-5 ನ್ನು ಸೃಷ್ಟಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಾನು ನಿಪಿ-6 ರಲ್ಲಿ ನಮೂದಿಸಿರುವ ದಿ.05-05-1990 ರಂದು ಆಗಿರುವ ಪಂಚಾಯಿತಿ ಪಾರಿಕತ್ ನ್ನು ನೋಡಿರುತ್ತೇನೆ, ಆದರೆ ಸದರಿ ಪಾರಿಕತ್ ನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನೀವು ಹೇಳುವ ಹಾಗೆ ದಿ.05-05-1990 ರಂದು ಯಾವುದೇ ಪಂಚಾಯಿತಿ ಪಾರಿಕತ್ ಆಗಿರುವುದಿಲ್ಲ ಮತ್ತು ಈ ದಾವೆಗಾಗಿ ನೀವು ನಿಪಿ-6 ನ್ನು ಸೃಷ್ಟಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

6. ನಿಪಿ-5 ರ ಆಧಾರದ ಮೇಲೆ ನಾನು ನಿಪಿ-8 ರಂತೆ ದಾವಾಸ್ವತ್ತಿಗೆ ಸಂಬಂಧಿಸಿದ ಕಂದಾಯವನ್ನು ಪಾವತಿ ಮಾಡಿರುತ್ತೇನೆ. ಈ ದಾವೆಗೋಸ್ಕರ ನೀವು ನಿಪಿ-8 ನ್ನು ಸೃಷ್ಟಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಸರ್ವೆ ನಂ.108/63 ರ ಸ್ವತ್ತನ್ನು ಒಟ್ಟುಗೂಡಿಸಿ ಸರ್ವೆ ನಂ.108 ಎಂದು ಮಾಡಲಾಗಿದೆ ಮತ್ತು ಅದನ್ನು ಯಾವ ಕಾರಣಕ್ಕಾಗಿ ಮಾಡಲಾಗಿದೆ ಎಂದು ನಿಮಗೆ ಗೊತ್ತಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ಸಾಮಾನ್ಯವಾಗಿ ಅಳತೆಗಳಲ್ಲಿ ವ್ಯತ್ಯಾಸ ಕಂಡಾಗ ಜಮೀನುಗಳನ್ನು ಒಟ್ಟು ಗೂಡಿಸಿ ಒಂದು ಸರ್ವೆ ನಂಬರ್ ನ್ನು ನೀಡುತ್ತಾರೆ ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ. ವಾದಿಯು ದಾವಾಸ್ವತ್ತನ್ನು ಅಡಮಾನ ಮಾಡಿ ಸಾಲವನ್ನು ಪಡೆದುಕೊಂಡಿರುತ್ತಾರೆ ಎಂದು ಹೇಳಿರುತ್ತೀರಾ ಮತ್ತು ಅದಕ್ಕೆ ಸಂಬಂಧಿಸಿದಂತೆ ಯಾವ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಪಹಣಿಯನ್ನು ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ನೀವು ದಾವಾಸ್ವತ್ತಿಗೆ ಸಂಬಂಧಿಸಿದಂತೆ ಬ್ಯಾಂಕಿನಿಂದ ಯಾವುದೇ ಸಾಲವನ್ನು ಪಡೆದುಕೊಳ್ಳದೇ ಇದ್ದರೂ ಸಹ ಈ ದಾವೆಗಾಗಿ ಸುಳ್ಳು ಸಾಕ್ಷ್ಯ

ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಾನು 1 ರಿಂದ 5 ನೇ ಪ್ರತಿವಾದಿಗಳನ್ನು ನೋಡಿದ್ದೇನೆ. 1 ರಿಂದ 5 ನೇ ಪ್ರತಿವಾದಿಗಳಿಗೆ ಸರ್ವೆ ನಂ. 108 ರಲ್ಲಿ ಜಮೀನು ಇದೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**